ತಲೆತಲಾಂತರಗಳಿಂದ ದಿಡ್ಡೀಮನಿ ಕುಟುಂಬಗಳೆಲ್ಲಾ ಊರ ಮಧ್ಯೆಯೇ ನೆಲೆನಿಂತವುಗಳಾಗಿದ್ದವು. ಆದರೆ ಕಾಲಾಂತರದಲ್ಲಿ ಎಲ್ಲಾ ಕುಟುಂಬಗಳೂ ಹಳ್ಳದ ದಂಡೆಯ ಹೊಲಕ್ಕೆ ಸ್ಥಳಾಂತರವಾದವು. ಇದಕ್ಕೆ ಕಾರಣ ನೀಲಪ್ಪನ ರಾತ್ರಿಯ ಆರ್ಭಟಗಳು. ಊರಿನಲ್ಲಿದ್ದ ಕೆಲ ಸೂಕ್ಷ್ಮ ಮನಸ್ಸಿನ ಜನರು ರಾತ್ರಿಯೆಲ್ಲ ಸೈರನ್ನಿನಂತೆ ಕೂಗುವ ಈತನ ಭೀಭತ್ಸಮಯವಾದ ಧ್ವನಿಯನ್ನು ಕೇಳಿ ಭಯಭೀತರಾಗಿದ್ದರು. ಒಂದು ದಿನ ಹನುಮನ ದೇವರ ಗುಡಿಯಲ್ಲಿ ಎಲ್ಲರೂ ಸಭೆ ಸೇರಿ, ನೀಲಪ್ಪ ಊರಲ್ಲಿ ವಾಸಿಸಬಾರದೆಂದು ತೀರ್ಮಾನ ಮಾಡಿದರು. ಅದರಂತೆ ನೀಲಪ್ಪ ತನ್ನ ಕೃಷ್ಣ ತಟದಲ್ಲಿರುವ ಭೂಮಿಯಲ್ಲಿ ಎರಡು ಅಂಕಣದಕೋಣೆ ಕಟ್ಟಿಸಿಕೊಂಡು ಸ್ಥಳಾಂತರಗೊಂಡ. ಆಮೇಲೆ ಎರಡು ವರ್ಷವಾದಮೇಲೆ ಎಲ್ಲಾ ದಿಡ್ಡೀಮನಿ ಕುಟುಂಬಗಳು ಸಹ ಸ್ಥಳಾಂತರಗೊಂಡವು.

ಆತ ಒಬ್ಬನೆ ಹಳ್ಳದ ದಂಡೆಯ ಹೊಲದಲಿ ವಾಸಿಸುತ್ತಿದ್ದಾಗಲೇ ನೀಲಪ್ಪನಿಗೆ ದುಬಲ್ಗುಂಡಿ ಸಂಗಮ್ಮ ಜೊತೆಯಾಗಿದ್ದಳು. ಹಗಲೆಲ್ಲ ಅವನ ಜೊತೆ ಕಳೆದು ರಾತ್ರಿಯ ಇವನ ಧ್ವನಿಯ ಆರ್ಭಟ ಸಹಿಸಿಕೊಳ್ಳಲಾರದೆ ತಮ್ಮ ಮೂಲಮನೆ ಸೇರಿಕೊಳ್ಳುತ್ತಿದ್ದಳು. ಮುಂದೆ ಈತನ ಅತಿಯಾದ ಕಾಮಕಾಯದ ಪ್ರಭಾವವನ್ನು ತಾಳಿಕೊಳ್ಳಲಾಗದೆ ಈತನಿಂದ ದೂರವಾಗಿ ಹಳೇ ಗೆಳೆಯ ಪುಗ್ಗಿ ಬಸ್ಸಯ್ಯನ ಜೊತೆ ಪುನರ್ಮಿಲನಗೊಂಡಳು. ಆದರೂ ಸಹ ಸಜ್ಜನ ನೀಲಪ್ಪನ ಜೊತೆ ಒಂದು ಸಹ್ಯವಾದ ಪ್ರೀತಿಯನ್ನೂ ಇಟ್ಟುಕೊಂಡಿದ್ದಳು. ಇದರ ದ್ಯೋತಕವಾಗಿ ದಿನಾಲು ಸಂಜೆ ಈಕೆ ಮಾಡುವ ಪುಗ್ಗಿ ಹಾಗೂ ಶೀಣೆಗಳನ್ನು ನೀಲಪ್ಪನಿಗೆ ತನ್ನ ಕೆಲಸದ ಆಳು ಮಾರನೊಂದಿಗೆ ಕಳುಹಿಸಿಕೊಡುತ್ತಿದ್ದಳು.ಇದಕ್ಕೆ ಸಹಿಷ್ಣು ಆಗಿದ್ದ ಪುಗ್ಗಿಬಸಯ್ಯನು ಒಪ್ಪಿಕೊಂಡಿದ್ದ.

ಹಗಲಿನಲಿ ಅಪ್ಪಟ ಮಿತಭಾಷಿ. ಪ್ರೀತಿಯೇ ಮೈವೆತ್ತಂತೆ ಇದ್ದ ನೀಲಪ್ಪ, ರಾತ್ರಿಯಲ್ಲಿ ಕಾಳ ಅಘೋರ ರೂಪ ತಾಳುತ್ತಿದ್ದ. ಇದರ ಜೊತೆ ಆತನ ಸಮಾಜಮುಖಿ ಕಾರ್ಯಗಳು ಜನಜನಿತವಾಗಿದ್ದವು. ತನ್ನ ಹತ್ತು ಎಕರೆ ಜಮೀನಿನಲ್ಲಿ ಎರಡು ಎಕರೆ ಹೊಲ ಸಾಲಿ ಕಟ್ಟಿಸಲು ಕೊಟ್ಟಿದ್ದ. ತನ್ನ ಮನೆಯಲ್ಲಿ ಮುಂಜಾನೆ ಮೊಮ್ಮಕ್ಕಳಿಗೆ ಹಾಗೂ ಊರ ದಲಿತ ಮಕ್ಕಳಿಗೆ ಆಂಗ್ಲ, ಗಣಿತ ಪಾಠ ಹೇಳಿಕೊಡುತ್ತಿದ್ದ. ಊರಲ್ಲಿ ಈತನ ಬಗ್ಗೆ ಒಂದು ಭಯವಿತ್ತು. ಈತ ಸೈನ್ಯದಲ್ಲಿ ಕೆಲಸ ಮಾಡಿದ್ದರಿಂದ, ಬಂದೂಕಿನಿಂದ ಯಾರನ್ನಾದರೂ ಹೊಡದು ಸಾಯಿಸಿದರೂ ಶಿಕ್ಷೆ ಇಲ್ಲ ಎಂದು ಜನರು ನಂಬಿದ್ದರು. ಅದನ್ನು ಉಪಯೋಗಿಸಿಕೊಂಡು, ಊರಲ್ಲಿದ್ದ ಕ್ವಾಂಟರ್‌ರಾಮಪ್ಪನ ಸಾರಾಯಿ ಅಂಗಡಿಯನ್ನು ಕಿತ್ತೆಸೆದು ಧೂಳಿಪಟ ಮಾಡಿದ್ದ. ಎಂಟು ಎಕರೆಯಲ್ಲಿ ಬೆಳೆಯುತ್ತಿದ್ದ ಜೋಳವನ್ನು ದಲಿತರಿಗೆ ಹಂಚುತ್ತಿದ್ದ. ಸಿರವಾರದಿಂದ ಎರಡು ದಿನಕ್ಕೊಮ್ಮೆ ಬಾಳೆಹಣ್ಣುಗಳನ್ನು ತಂದು ದಲಿತ ಹುಡುಗರಿಗೆ ಹಂಚುತ್ತಿದ್ದ. ಒಂದು ದಿನ ತನ್ನ ಮಿಲಿಟರಿ ಬಂದೂಕನ್ನು ಹಿಡಿದು ದಲಿತರನ್ನು ಊರ ಮುಂದಿನ ಹನುಮಪ್ಪನಗುಡಿಯೊಳಗೆ ನುಗ್ಗಿಸಿಯೇಬಿಟ್ಟಿದ್ದ. ಇಂತಹ ನೀಲಪ್ಪ ತನ್ನ ಪಿತ್ರಾರ್ಜಿತ ಆಸ್ತಿಯಲ್ಲಿ ಒಂದಂಗುಲವನ್ನೂ ಅಪೇಕ್ಷಿಸಿರದಿದ್ದರೂ ತಮ್ಮನ ಮಕ್ಕಳಿಂದ ತಮ್ಮನ ಹೆಂಡತಿಯರಿಂದ ಅವ್ಯಾಹತವಾಗಿ ನಿಂದನೆಗೆ ಒಳಗಾಗುತ್ತಿದ್ದ. ದುಬಲಗುಂಡಿಗೆ ಸಂಗವ್ವನಿಗೆ ಬಂಗಾರ, ರೊಕ್ಕ ಕೊಟ್ಟಿದ್ದಾನೆಂಬ ಸುದ್ದಿ ಇವರೇ ಹಬ್ಬಿಸಿದ್ದರು. ಇಂತಹ ಅನಂತ ಒತ್ತಡಗಳು ನೀಲಪ್ಪನನ್ನು ಇನ್ನಾವುದೇ ಲೋಕಕ್ಕೆ ಕರೆದುಕೊಂಡು ಹೋಗುತ್ತಿತ್ತು.

ಅಂದು ಪಂಚಕಲ್ಯಾಣಿ ಕುದುರೆ ಹತ್ತಿ ಸಿರವಾರಕ್ಕೆ ಹೋಗಿ ಬಂದು ಹುಡುಗರಿಗೆ ಪಾಠ ಹೇಳಿದ. ಮತ್ತೆ ಹಗಲೆಲ್ಲಾ ಒಬ್ಬನೇ ರೂಮಿನಲ್ಲಿಕಳೆದ. ಸುನಾಮಿಯಂತೆ ನುಗ್ಗಿ ಬಂದ ನೆನಪುಗಳು, ಪಾಪ ಪ್ರಜ್ಞೆಗಳು ಅಗಾಧವಾಗಿ ಬೆನ್ನುಬಿದ್ದಿದ್ದವು. ಯುದ್ಧದ ಹೆಣಗಳು, ರಕ್ತ, ಮಾಂಸ, ಮಜ್ಜೆಗಳು, ವೈದ್ಯಕೀಯ ಡೇರೆಗಳು, ತನ್ನ ತಮ್ಮಂದಿರು, ಮರ್ಲಿನ್ ಎನ್ನುವ ಅವಳು, ಸಂಗಮ್ಮ ಎನ್ನುವ ಇವಳು, ಎಲ್ಲರೂ ಸೇರಿ ತನ್ನನ್ನು ಆಕ್ರಮಿಸುತ್ತಿದ್ದಾರೆ ಎನ್ನಿಸುತ್ತಿತ್ತು. ಯುದ್ಧ ಭೂಮಿಯಲ್ಲಿದ್ದ ಆ ತಾತ್ಕಾಲಿಕ ವೈದ್ಯಕೀಯ ಡೇರೆಯಲ್ಲಿ ಇವನ ಎದೆಯನ್ನು, ಕರುಳನ್ನು, ಮೂತ್ರಪಿಂಡಗಳನ್ನು ಯಾರೋ ಬಗಿಯುತ್ತಿದ್ದಾರೆ ಎನಿಸುತ್ತಿತ್ತು. ನೋವುಗಳು ಆಕ್ರಂದಿಸಹತ್ತಿದವು. ಇಂದು ಅವನು ಹಗಲಿನಲ್ಲೆ ಊರಿಗೆ ಊರೆ ತಿರಗುಬೀಳುವಂತೆ ಗರ್ಜಿಸಹತ್ತಿದ.

●